

# ಹಕ್ಕಿನ ಹಕ್ಕಿ ಗೂಡು

ಜತನದಿಂದ ಹುಡುಕಿ ತಂದ ಬಿರುಸು
ಎಳೆಗಳ ಹಣೆದು; ಚೆಂದದಿ ಹೆಣೆದು
ಬಿರುಕು ಬಿಡಲು ಗೋಡೆಯೇ ಇರದ
ಗೂಡು ಕಟ್ಟಿತು ಗಂಡು ಹಕ್ಕಿ

ಎಂಥಾ ಮೋಹದ ಗಂಡ ಎಂಥಾ
ಮೋಹಕ ಗೂಡು? ಹೆಣ್ಣು ಹಕ್ಕಿಗೆ
ಗೂಡು ಕಂಡಿತೋ ಗಂಡು ಕಂಡಿತೋ

ಆ ಮರುಳು ಹೆಣ್ಣು, ಗಂಡು
ಗೂಡಿನ ಮಾಟಕೆ ಮಣಿದು;
ಕೊರಳಿನ ಉಲಿಗೆ ನಾಚುತ
ಎದೆಗೆ ಒರಗಿತು ಒಲಿದು

ಅಪ್ಪಿದವ ಅಪ್ಪನಾದ; ಅಪ್ಪುಗೆ
ಸುಖಕೆ 'ಅಮ್ಮಮ್ಮಾ' ಎಂದು
ನರಳಿದ ಹೆಣ್ಣು ಅಮ್ಮನಾಯಿತು

ಚಂದದ ಗೂಡಲಿ ನಾಕಿರುಳ
ಏಕಾಂತ, ಹದಬೆಚ್ಚನೆ ಬಿಸಿಲಿಗೆ
ರೆಕ್ಕೆ ಬಿಚ್ಚಿ ಕೂರುವ ಲೋಕಾಂತ
ಹೆಣ್ಣು ಹಕ್ಕಿ ಬಯಸಿತ್ತು...

ಅಪ್ಪುಗೆಗೆ ಬಸಿರಾಗದಿರಲು ಯಾವ
ಹಕ್ಕಿಗೆ ಹಕ್ಕುಂಟು? ಗೂಡು ಕಟ್ಟಿ
ತಂದಿರಿಸಿರುವುದು ಅಮ್ಮನಲ್ಲವೇ!

ಅಮ್ಮನಾದ ಮೇಲೆ ಏನುಳಿಯಿತು?
ಗೂಡೊಳಗೆ ಬಂದಿಯಾಗಿ ಹಕ್ಕಿಯ
ಹಕ್ಕು ಸ್ವಾತಂತ್ರ್ಯವಳಿಯಿತು!

● **ವಸುಂಧರಾ ಕದಲೂರು**

ಕಲೆ: ವಾಗೀಶ ಹೆಗಡೆ

